# ಫಾರಂ ನಂ. 12
## (ನಿಯಮ-14(3) ರ ಪ್ರಕಾರ)
## ಚುನಾವಣಾ ವೇಳಾಪಟ್ಟಿ ಪ್ರಕಟಣೆ

ದಿ ಬಿ.ಹೆಚ್.ಇ.ಎಲ್. ಆಫೀಸರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಂದಿ ವ್ಯೂ ಲೇಔಟ್, ಕರಹಳ್ಳಿ ಕ್ರಾಸ್, ಕುಡುವಟ್ಟಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ-562 103 ಇದರ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ದಿನಾಂಕ: 02-09-2023 ರ ಶನಿವಾರ ದಂದು ಬೆಳಗ್ಗೆ: 9.00 ಗಂಟೆಯಿಂದ ಸಂಜೆ: 4.00 ಗಂಟೆಯವರೆಗೆ ಸಂಘದ ಆವರಣದಲ್ಲಿ ಚುನಾವಣೆ ನಡೆಸಲಾಗುವುದು. ಚುನಾವಣಾ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ವಿವರ | ದಿನಾಂಕ ಮತ್ತು ವೇಳೆ |
|---|---|---|
| 1. | ಸ್ಪರ್ಧಿಸಲು ಇಚ್ಚಿಸುವಂತಹ ಸದಸ್ಯರುಗಳು ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ: 18-08-2023 ಶುಕ್ರವಾರ ಬೆಳಗ್ಗೆ 11-00 ಗಂಟೆಯಿಂದ ಸಂಜೆ 05-00 ಗಂಟೆಯವರೆವಿಗೆ ರಿಟರ್ನಿಂಗ್ ಆಫೀಸರ್‌ಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ |
| 2. | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ನಿಯಮ-14 ಎ) | ದಿನಾಂಕ: 25-08-2023 ಶುಕ್ರವಾರ ಬೆಳಗ್ಗೆ 11-00 ಗಂಟೆಯಿಂದ ಸಂಜೆ 05-00 ಗಂಟೆಯವರೆವಿಗೆ ರಿಟರ್ನಿಂಗ್ ಆಫೀಸರ್‌ಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ |
| 3. | ನಾಮಪತ್ರಗಳ ಪರಿಶೀಲನೆ, ರಿಟರ್ನಿಂಗ್ ಆಫೀಸರ್‌ರವರಿಂದ (ನಿಯಮ-14 ಬಿ) | ದಿನಾಂಕ: 26-08-2023 ಶನಿವಾರ ಮಧ್ಯಾಹ್ನ 01.30 ಗಂಟೆಯಿಂದ |
| 4. | ಕ್ರಮಬದ್ಧವಾದ ನಾಮಪತ್ರಗಳ ಪಟ್ಟಿ ಪ್ರಕಟಣೆ, ರಿಟರ್ನಿಂಗ್ ಆಫೀಸರ್‌ರವರಿಂದ (ನಿಯಮ-14 ಬಿ(4)) | ದಿನಾಂಕ: 26-08-2023 ಶನಿವಾರ ನಾಮಪತ್ರಗಳ ಪರಿಶೀಲನೆಯ ನಂತರ |
| 5. | ನಾಮಪತ್ರಗಳನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ (ನಿಯಮ-14 ಸಿ) | ದಿನಾಂಕ:27-08-2023 ಭಾನುವಾರ ಮಧ್ಯಾಹ್ನ 3.30 ಗಂಟೆಯ ವರೆಗೆ |
| 6. | ಚುನಾವಣೆಯಲ್ಲಿ ಸ್ಪರ್ಧಿಸುವ ಅಂತಿಮ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ-14 ಡಿ) | ದಿನಾಂಕ:27-08-2023 ಭಾನುವಾರ ಮಧ್ಯಾಹ್ನ 3.30 ಗಂಟೆಯ ನಂತರ |
| 7. | ಅಗತ್ಯವಾದಲ್ಲಿ, ಅಭ್ಯರ್ಥಿಗಳಿಗೆ ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣಾ ಚಿಹ್ನೆ ಹಂಚಿಕೆ (ನಿಯಮ-14 ಇ) | ದಿನಾಂಕ:27-08-2023 ಭಾನುವಾರ ಮಧ್ಯಾಹ್ನ 3.00 ಗಂಟೆಯ ನಂತರ |
| 8. | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ (ನಿಯಮ-14 ಇ ಮತ್ತು 14- ಎಫ್) | ದಿನಾಂಕ: 29-08-2023 ಮಂಗಳವಾರ ಮಧ್ಯಾಹ್ನ 5.00 ಗಂಟೆಯ ನಂತರ |
| 9. | ಚುನಾವಣೆ ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ. | ದಿನಾಂಕ: 02-09-2023 ಶನಿವಾರ ಬೆಳಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ. ಸಂಘದ ಆವರಣದಲ್ಲಿ. |
| 10. | ಮತ ಎಣಿಕೆ ದಿನಾಂಕ ಮತ್ತು ವೇಳೆ | ದಿನಾಂಕ: 02-09-2023 ಶನಿವಾರ ಮತದಾನ ಪೂರ್ಣಗೊಂಡ ನಂತರ |
| 11. | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣೆಯ ಫಲಿತಾಂಶ ಪ್ರಕಟಣೆ | ದಿನಾಂಕ: 02-09-2023 ಶನಿವಾರ ಮತ ಎಣಿಕೆಯ ನಂತರ |

ಸೂಚನೆಗಳು ಮುಂದುವರೆದಿದೆ. . . .

## ಸೂಚನೆಗಳು

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 ರ ಪ್ರಕಾರ ಆಡಳಿತ ಮಂಡಳಿಗೆ ಒಟ್ಟು 13 (ಹದಿಮೂರು) ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗಿರುತ್ತದೆ. ಈ ಪೈಕಿ 01 (ಒಂದು) ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ, 01 (ಒಂದು) ಸ್ಥಾನವನ್ನು ಪರಿಶಿಷ್ಟ ಪಂಗಡದವರಿಗೆ, 02 (ಎರಡು) ಸ್ಥಾನಗಳನ್ನು ಮಹಿಳೆಯರಿಗೆ, 01 (ಒಂದು) ಸ್ಥಾನವನ್ನು ಹಿಂದುಳಿದ ವರ್ಗದ (ಪ್ರವರ್ಗ 'ಎ') ಗೆ ಮೀಸಲಾಗಿರುತ್ತದೆ, 01 (ಒಂದು) ಸ್ಥಾನವನ್ನು ಹಿಂದುಳಿದ ವರ್ಗದ (ಪ್ರವರ್ಗ 'ಬಿ') ಗೆ ಮೀಸಲಾಗಿರುತ್ತದೆ ಹಾಗೂ ಉಳಿದ 07 (ಏಳು) ಸ್ಥಾನಗಳು ಸಾಮಾನ್ಯ ವರ್ಗಕ್ಕೆ ಇರುತ್ತದೆ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರಗಳ ಜೊತೆಯಲ್ಲಿ ಆಯಾ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಸದಸ್ಯರು ತಮ್ಮ ನಾಮಪತ್ರದಲ್ಲಿ ತಾವು ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.
3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸದಿದ್ದರೆ/ಲಗತ್ತಿಸದಿದ್ದರೆ ಅಂತಹ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
4. ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ನಿಯಮಗಳು-1960 ರ ನಿಯಮ-14 ರ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಉಮೇದುವಾರರು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಹೊಂದಿರುವ ಒಬ್ಬ ಸೂಚನೆಯೊಂದಿಗೆ ನಾಮಪತ್ರಗಳನ್ನು ಸಲ್ಲಿಸಬೇಕು. ಅನರ್ಹ ಸದಸ್ಯರ ಸಹಿಯೊಂದಿಗೆ ಸೂಚಿಸಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
5. ಒಬ್ಬ ಸದಸ್ಯ ಒಂದು ವರ್ಗದ ಒಬ್ಬ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದಲ್ಲಿ ಮೊದಲು ಸೂಚಿಸಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ ಉಳಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
6. ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಲಿಚ್ಛಿಸುವ ಸದಸ್ಯರು ಸಹಕಾರ ಸಂಘಗಳ ಕಾಯ್ದೆ, ನಿಯಮಗಳ ಮತ್ತು ಸಂಘದ ಉಪನಿಯಮಗಳಲ್ಲಿ ನಿರ್ದಿಷ್ಟ ಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.
7. ನಿಯಮ-14(ಎ) ರ ಪ್ರಕಾರ ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಸಂಘದ ಹೆಸರಿನಲ್ಲಿ ರೂ.2000/- (ರೂ. ಎರಡು ಸಾವಿರ ಮಾತ್ರ) ಗಳನ್ನು ಚುನಾವಣಾ ಠೇವಣಿಯಾಗಿ ಪಾವತಿಸಬೇಕು. ಹಾಗೂ ಪರಿಶಿಷ್ಟ ಜಾತಿಯ ಮೀಸಲು ಸ್ಥಾನ, ಪರಿಶಿಷ್ಟ ವರ್ಗದ ಮೀಸಲು ಸ್ಥಾನ, ಹಿಂದುಳಿದ ವರ್ಗದ ಮೀಸಲು ಸ್ಥಾನ ಹಾಗೂ ಮಹಿಳಾ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣಾ ಠೇವಣಿಯ ಶೇ. 50 ರಷ್ಟು ಅಂದರೆ ರೂ. 1000/- (ರೂ. ಒಂದು ಸಾವಿರ ಮಾತ್ರ) ಗಳ ಠೇವಣಿಯನ್ನು ನಾಮಪತ್ರ ಸಲ್ಲಿಸುವ ಪೂರ್ವದಲ್ಲಿ ಸಂಘದಲ್ಲಿ ಠೇವಣಿ ಹಣ ಸಂದಾಯ ಮಾಡಿ ಇಲ್ಲವೇ ಬ್ಯಾಂಕರ್ಸ್ ಚೆಕ್/ ಡಿಮಾಂಡ್ ಡ್ರಾಫ್ಟ್‌ಗಳನ್ನು (ಸಂಘದ ಹೆಸರಿನಲ್ಲಿ) ಪಡೆದು ನಾಮಪತ್ರದೊಂದಿಗೆ ಲಗತ್ತಿಸಬೇಕು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೇ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
8. ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ನಾಮಪತ್ರ ಸಲ್ಲಿಸಿರುವವರು ಮಾತ್ರ ಹಾಜರಿರಬಹುದು.
9. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರಗಳನ್ನು ಸಂಘದ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಸದರಿ ಕಛೇರಿಯಲ್ಲಿಯೇ ಅಧಿಕೃತ ಅಧಿಕಾರಿಗಳಿಗೆ ನಾಮಪತ್ರಗಳನ್ನು ಸಲ್ಲಿಸಬಹುದು.

10. ಸದಸ್ಯರು ಯಾವುದಾದರೂ ಒಂದು ಸ್ಥಾನದಿಂದ ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ. ತಪ್ಪಿದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ರಿಟರ್ನಿಂಗ್ ಅಧಿಕಾರಿಯವರಿಗೆ ಅಧಿಕಾರವಿರುತ್ತದೆ.
11. ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಖುದ್ದಾಗಿ ಅರ್ಜಿಯನ್ನು ಸಲ್ಲಿಸಿ, ಉಮೇದುವಾರಿಕೆಯನ್ನು ವಾಪಸ್ಸು ಪಡೆಯಬಹುದು. ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗೆ ಅದನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅಥವಾ ರದ್ದುಪಡಿಸಲು ಅವಕಾಶವಿರುವುದಿಲ್ಲ.
12. 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ-14(ಇ), ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ (ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ. ಚಿಹ್ನೆ ಹಂಚಿಕೆಯಲ್ಲಿ ರಿಟರ್ನಿಂಗ್ ಅಧಿಕಾರಿಯವರದೇ ಅಂತಿಮ ತೀರ್ಮಾನ
13. ನಿಗಧಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಯಾವುದೇ ಕಾರಣದಿಂದಲೂ ಸ್ವೀಕರಿಸುವುದಿಲ್ಲ.
14. ಸದಸ್ಯರು ಮತಚಲಾಯಿಸಲು ಮತಗಟ್ಟೆಗೆ ಬರುವಾಗ ಕಡ್ಡಾಯವಾಗಿ ಸಂಘವು ವಿತರಿಸಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು ಹಾಜರುಪಡಿಸತಕ್ಕದ್ದು. ಭಾವಚಿತ್ರವುಳ್ಳ ಗುರುತು ಚೀಟಿಯನ್ನು ಹಾಜರುಪಡಿಸದಿದ್ದಲ್ಲಿ ನಿಯಮಗಳ ರೀತ್ಯಾ ಮತದಾನದ ಅವಕಾಶವನ್ನು ನಿರಾಕರಿಸಲಾಗುವುದು.
15. ಚುನಾವಣಾ ಪ್ರಕ್ರಿಯೆಯು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ಚೌಕಟ್ಟಿನಲ್ಲಿ ಜರಗುತ್ತದೆ.

ಸ್ಥಳ: ಬೆಂಗಳೂರು,
ದಿನಾಂಕ: 17-08-2023.

(ರಾಕೇಶ್ ಹೆಚ್.ಸಿ.)
ರಿಟರ್ನಿಂಗ್ ಆಫೀಸರ್
ದಿ ಬಿ.ಹೆಚ್.ಇ.ಎಲ್. ಆಫೀಸರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಂದಿ ವ್ಯೂ ಲೇಔಟ್,
ಕರಹಳ್ಳಿ ಕ್ರಾಸ್, ಕುಡುವಟ್ಟಿ, ನಂದಿ ಹೋಬಳಿ,
ಚಿಕ್ಕಬಳ್ಳಾಪುರ-562 103.

## <u>Following are the eligibility criteria.</u>

1. Those members who attended a minimum of <u>two General body meetings</u> during the last five years are only eligible to contest in the election.

2. Members who have defaulted during last two years are not eligible to contest in this election.

3. Members who have been disqualified by the society due to violation of society rules & regulations & bylaws are also not eligible to contest in this election.

4. Nomination applications are available at the following address:

    BHEL Officers Housing Co-Operative Society Ltd.
    Nandi View Layout, Near Karahalli
    Kuduvati, Nandi hobli, Chikkaballapura – 562103

**Members meeting the above eligibility criteria, are requested to fill their nominations on or before 25.08.2023, and handover the same at the above address. (Refer page 2, sl No. 09 of the notification)**